# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು–570006.

ಆಡಳಿತ ವಿಭಾಗ

'ಕನ್ನಡ ಕಾಯಕ ವರ್ಷಾಚರಣೆ' ೧ನೇ ನವೆಂಬರ್ ೨೦೨೦ ರಿಂದ ೩೧ನೇ ಅಕ್ಟೋಬರ್ ೨೦೨೧ ರವರೆಗೆ

ಸಂಖ್ಯೆ: ಕರಾಮುವಿ/ಆವಿ/ಜಿಎಲ್-2/2021-22 ದಿನಾಂಕ: 19.04.2021

## ಸುತ್ತೋಲೆ

ವಿಷಯ : ವಿ.ವಿ. ನಿಲಯದಲ್ಲಿ ಇ-ಆಫೀಸ್ ತಂತ್ರಾಂಶದ ಅನುಷ್ಠಾನವನ್ನು ಅಳವಡಿಸಿಕೊಳ್ಳುವ ಬಗೆಗೆ.

ಉಲ್ಲೇಖ : 1. ನೋಡಲ್ ಅಧಿಕಾರಿ ಇ- ಕಚೇರಿ(e-office), ಕರಾಮುವಿ, ಇವರ ಪತ್ರ ದಿ: 05.04.2021.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.04.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉನ್ನತ ಶಿಕ್ಷಣ ಇಲಾಖೆ ವತಿಯಿಂದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರು ಮತ್ತು ಇ-ಆಫೀಸ್ ನೋಡಲ್ ಅಧಿಕಾರಿಗಳೊಂದಿಗೆ ಡಾ. ಭಾಗ್ಯವಾನ್, ವಿಶೇಷಾಧಿಕಾರಿ, ಉನ್ನತ ಶಿಕ್ಷಣ ಇಲಾಖೆ, ರವರು ದಿನಾಂಕ: 05.04.2021 ರಂದು ವಿಶ್ವವಿದ್ಯಾನಿಲಯಗಳಲ್ಲಿ ಇ-ಕಚೇರಿ (e-office) ತಂತ್ರಾಂಶ ಅನುಷ್ಠಾನ ಸಂಬಂಧ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ, ಈ ಸಭೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಇ-ಕಚೇರಿ (e-office) ತಂತ್ರಾಂಶ ಅನುಷ್ಠಾನವಾಗಿಲ್ಲದಿರುವ ಬಗ್ಗೆ ತೀವ್ರವಾಗಿ ಆಕ್ಷೇಪಿಸಿರುವ ಹಿನ್ನೆಲೆಯಲ್ಲಿ ವಿ.ವಿ.ಯು ಇನ್ನು ಮುಂದೆ ಎಲ್ಲಾ ರೀತಿಯ ಪತ್ರ ಹಾಗೂ ಕಡತಗಳನ್ನು ಇ-ಕಚೇರಿ(e-office) ತಂತ್ರಾಂಶದ ಮುಖಾಂತರ ನಿರ್ವಹಿಸಲು ತಿಳಿಸಿರುತ್ತಾರೆ.

ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನದಂತೆ ಇ-ಕಚೇರಿ(e-office) ವತಿಯಿಂದ ಈಗಾಗಲೇ ಕರಾಮುವಿ ನಿಲಯದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ತಂತ್ರಾಂಶದ ಬಳಕೆಯ ಬಗ್ಗೆ ತರಬೇತಿಯನ್ನು ನೀಡುವುದರೊಂದಿಗೆ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನೂ ಸಹ ನೀಡಿದ್ದು, ಪತ್ರ ಹಾಗೂ ಕಡತಗಳ ನಿರ್ವಹಣೆಯನ್ನು ಇ-ಕಚೇರಿ (e-office) ತಂತ್ರಾಂಶದ ಮುಖಾಂತರ ಕಡ್ಡಾಯವಾಗಿ ನಿರ್ವಹಿಸಲು ತಿಳಿಸಿದೆ.

ಇ-ಕಚೇರಿ(e-office) ತಂತ್ರಾಂಶವನ್ನು ಎಲ್ಲಾ ವಿಭಾಗಗಳಲ್ಲಿ ಹಾಗೂ ಅಧ್ಯಯನ ವಿಭಾಗಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು ಮತ್ತು ಇದರ ಸಮರ್ಪಕ ನಿರ್ವಹಣೆಯ ಹೊಣೆಯು ಆಯಾ ವಿಭಾಗಗಳ ಮುಖ್ಯಸ್ಥರ ಜವಾಬ್ದಾರಿಯಾಗಿರುತ್ತದೆ.

(ಮಾನ್ಯ ಕುಲಸಚಿವರಿಂದ ಕರಡು ಪ್ರತಿ ಅನುಮೋದಿಸಲ್ಪಟ್ಟಿದೆ)

ಉಪಕುಲಸಚಿವ(ಸಾಮಾನ್ಯ)

ಗೆ,

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು.
3. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಕರಾಮುವಿ, ಮೈಸೂರು.
4. ಎಲ್ಲಾ ಉಪಕುಲಸಚಿವರು, ಕರಾಮುವಿ, ಮೈಸೂರು.
5. ಎಲ್ಲಾ ಸಹಾಯಕ ಕುಲಸಚಿವರು, ಕರಾಮುವಿ, ಮೈಸೂರು.
6. ನಿರ್ದೇಶಕರು, ಪ್ರವೇಶಾತಿ, ಕರಾಮುವಿ, ಮೈಸೂರು.
7. ಸಹಾಯಕ ಕಾರ್ಯಪಾಲಕ ಅಭಿಯಂತರು, ಇಂಜಿನಿಯರಿಂಗ್ ವಿಭಾಗ, ಕರಾಮುವಿ, ಮೈಸೂರು.
8. ಗ್ರಂಥಪಾಲಕರು, ಗ್ರಂಥಾಲಯ, ಕರಾಮುವಿ, ಮೈಸೂರು.

ಪ್ರತಿ,

1. ಮಾನ್ಯ ಕುಲಪತಿಗಳ ವಿಶೇಷ ಕರ್ತವ್ಯಾಧಿಕಾರಿಗಳು, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಐ.ಸಿ.ಟಿ ಸೆಲ್, ಕರಾಮುವಿ, ಮೈಸೂರು.
4. ಕಚೇರಿ ಪ್ರತಿ.